**OS. No.23/2021** **PW – 2**

ಪ್ರಮಾಣೀಕರಿಸಲಾದ ದಿನಾಂಕಃ **20.08.2025.**

ಸಾಕ್ಷಿಯು ಮಲೆಯಾಳಂ ಭಾಷೆ ಬಲ್ಲವರಾಗಿದ್ದು ಅವರಿಗೆ ಕನ್ನಡ ಓದಲು ಬರೆಯಲು ಬರದ ಕಾರಣ, ಮಲೆಯಾಳಂ ಮತ್ತು ಕನ್ನಡ ಭಾಷೆ ಗೊತ್ತಿರುವಂತಹ ಶ್ರೀ ಸಿ. ಪಿ. ಪಿ. ವಕೀಲರು, ಪೊನ್ನಂಪೇಟೆ ರವರನ್ನು ಸಾಕ್ಷಿದಾರರ ಹೇಳಿಕೆಯನ್ನು ದಾಖಲುಮಾಡಿಕೊಳ್ಳಲು ತರ್ಜುಮೆದಾರರಾಗಿ ನೇಮಕ ಮಾಡಿಕೊಳ್ಳಲಾಯಿತು ಹಾಗು ತರ್ಜುಮೆದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಕೆ. ಪಿ. ಬಿ. ವಕೀಲರಿಂದಃ

ನಾನು 42 ವರ್ಷದಿಂದ ಕೊಡಗಿನಲ್ಲಿದ್ದೇನೆ. ನನಗೆ 1 ನೇ ವಾದಿಯ ಗಂಡ ಗೊತ್ತು. ಒಂದನೇ ವಾದಿಯ ಗಂಡನ ತಂಗಿಯಾದ 2 ನೇ ಪ್ರತಿವಾದಿಯನ್ನು ನೋಡಿದ್ದೇನೆ, ಆದರೆ ಹೆಸರು ಗೊತ್ತಿಲ್ಲ. 1 ನೇ ವಾದಿಯ ಮನೆಯಲ್ಲಿ 2 ನೇ ಪ್ರತಿವಾದಿಯನ್ನು ನೋಡಿರುತ್ತೇನೆ. 1 ನೇ ವಾದಿ ಅವರಿಗೆ ಹುಷಾರಿಲ್ಲದಿದ್ದಾಗ ಅವರ ಮನೆಯಲ್ಲಿ 2 ನೇ ಪ್ರತಿವಾದಿಯನ್ನು ನೋಡಿರುತ್ತೇನೆ. 2 ನೇ ಪ್ರತಿವಾದಿಯ 1 ನೇ ಪ್ರತಿವಾದಿಯ ಮಗನನ್ನು ನೋಡಿದ್ದೇನೆ. 1 ನೇ ವಾದಿ ತೀರಿಕೊಂಡಾಗ ಮತ್ತು ಅವರ ಮಗ ತೀರಿಕೊಂಡಾಗ ನಾನು 1 ನೇ ಪ್ರತಿವಾದಿಯನ್ನು ನೋಡಿರುತ್ತೇನೆ. 1 ಮತ್ತು 2 ನೇ ಪ್ರತಿವಾದಿ 1 ನೇ ವಾದಿಯ ಜೊತೆ ದಾವಾಸ್ವತಿನ ಮನೆಯಲ್ಲಿ ವಾಸವಿರಲಿಲ್ಲ. ನಾನು ನೋಡಿದಾಗಿನಿಂದಲೂ ವಾದಿಗಳು ದಾವಾಸ್ವತಿನ ಮನೆಯಲ್ಲಿ ಇರುತ್ತಾರೆ, ಈ ಸ್ವತ್ತಿಗೆ ಸಂಬಂದ ದಾಖಲೆಗಳನ್ನು ನೋಡಿದ್ದೇನೆ.

ಕನ್ನಡದಲ್ಲಿ ದಾಖಲೆ ಇತ್ತು. ಆದರೆ ಅಂಕಿಗಳಲ್ಲಿ ಸ್ವತ್ತಿನ ವಿವರ ಇತ್ತು ತಿಳಿದುಕೊಂಡಿರುತ್ತೇನೆ. ಆರ್ ಟಿ ಸಿ ದಾಖಲೆ ಮಾತ್ರ ನೋಡಿರುತ್ತೇನೆ. ನಿ. ಪಿ. 16 ಆರ್ ಟಿ ಸಿ ಯನ್ನು ಸಾಕ್ಷಿಗೆ ತೋರಿಸಲಾಗಿ ಸ್ವತ್ತು ಇದೆ ಆಗಿರುತ್ತದೆ, ಆದರೆ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಾಗುತ್ತಿಲ್ಲ. ನಾನು ವಾದಿಗಳ ದಾವಾ ಮನೆಯ ದಾಖಲೆಗಳು ನೋಡಿದ್ದೇನೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. 1 ನೇ ವಾದಿಗೆ 3 ಜನ ಮಕ್ಕಳು, ಇವರ ಒಬ್ಬ ಮಗ ಜಾನ್ ಜೋಶ್ವರವರು ದಿ. 26.02.2025 ರಂದು ಸತ್ತು ಹೋಗಿದ್ದು. ಇನ್ನಿಬ್ಬರು ಇದ್ದಾರೆ.

1 ನೇ ವಾದಿಯ ಗಂಡ ಕೂಲಿ ಕೆಲಸ ಅಲ್ಲ Writer ಆಗಿ Faith estate ನಲ್ಲಿ ಕೆಲಸ ಮಾಡುತ್ತಿದ್ದರು. 1 ನೇ ವಾದಿಯು ಇದೇ estate ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ, ಮನೆ ಕೆಲಸ ಮಾಡಿಕೊಂಡು ಮನೆಯಲ್ಲಿದ್ದರು. 1 ನೇ ವಾದಿಯ ಗಂಡ ಮನೆ ಕಟ್ಟಿಸುವಾಗ ನಾನು ಇರಲಿಲ್ಲ ಎಂದರೆ ಸರಿ. ನಾನು ಯಾರು ಕಟ್ಟಿದ್ದಾರೆ ಎಂದು ನೋಡಿಲ್ಲ ಎಂದರೆ ಸರಿ, ಆದರೆ ನನ್ನ ಗಂಡ ನೋಡಿರುತ್ತಾನೆ. 2 ನೇ ವಾದಿ ಮತ್ತು ನಾವು ಅಕ್ಕಪಕ್ಕದ ಮನೆಯವರಾಗಿದ್ದು ಸಂಬಂಧ ಚೆನ್ನಾಗಿದೆ ಎಂದರೆ ಸರಿ. 2 ನೇ ವಾದಿ ಈ ದಿನ ಸಾಕ್ಷ್ಯವನ್ನು ಕೊಡಲು ಹೇಳಿರುತ್ತಾರೆ ಎಂದರೆ ಸರಿ, ಆದರೆ ನನಗೆ ಗೊತ್ತಿರುವುದು ಹೇಳುತ್ತಿದ್ದೇನೆ. ದಾವಾ ಮನೆ ಜೊತೆಗೆ ತೋಟ ಮತ್ತು estate ನಲ್ಲಿ ಕೆಲಸ ಮಡುತ್ತಿದ್ದರು Workshop ಇದೆ.

ನಾನು ಈಗ ಹೇಳುತ್ತಿರುವ ಸಾಕ್ಷ್ಯ 2 ನೇ ವಾದಿಯಿಂದ ತಿಳಿದುಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳನ್ನು 2021 ರಲ್ಲಿ ಆ ದಾವಾ ಮನೆಯಲ್ಲಿ ನೋಡಿಲ್ಲ. 1 ನೇ ಪ್ರತಿವಾದಿಯ ತಂದೆ ದಾವಾ ಮನೆ ಇರುವ ಆಸ್ತಿಯನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಚಾರ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ವಾದಿಯ ಜೊತೆ ಸಂಬಂಧ ಅನ್ಯೋನ್ಯವಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಬೆಂಗಳೂರು ವಾಸವಾಗಿದ್ದು, ಈ ದಾವಾ ಮನೆಯನ್ನು 1 ನೇ ವಾದಿಯ ತಂದೆ ಅವರಿಗೆ ನೋಡಿಕೊಳ್ಳಲು ಹೇಳಿದ್ದರು ಎಂದರೆ ಸರಿಯಲ್ಲ. ಈಗಲೂ ಪ್ರತಿವಾದಿಗಳು ದಾವಾ ಮನೆಯಲ್ಲಿ ಸ್ವಾದೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-
ಸಿವಿಲ್ ನ್ಯಾಯಾಧೀಶರು, ಪೊನ್ನಂಪೇಟೆ.